# 9

# ಯೇಸು ಮರಣದಿಂದ ನಿಜವಾಗಿ ಎದ್ದು ಬಂದನೇ?

ಆತನು ರೋಮಾಯಲಿಂದ ಕ್ರೂಜಿತನಾಗಿ ಎದ್ದು ಬಂದ ನಂತರ, ಆತನ ಜೀವಿತ ಹಾಗೂ ಮರಣದ ಕುರಿತ ವಿಚಾರವು, ಹೊಸ ಒಡಂಬಡಿಕೆಯಲ್ಲಿ ಒಂದು ವಾದಗ್ರಸ್ತ ಸಂಗತಿಯಾಗಿದೆ. ಸಾಮಾನ್ಯವಾದ ವಿಚಾರದಂತೆ, ಮರಣದ ಸಂಗತಿಯು ಪುನಃ ಚೇತನಗೊಳ್ಳುವದು ಅಸಾಧ್ಯ ವಾದದ್ದಾಗಿದೆ! ಕೆಲವರು ತಾವು ಮರಣಹೊಂದಿ, ಎದ್ದು ಬಂದಿರುವೆವು ಎನ್ನುವ ವಿಚಾರವು ವಿವರ ನೀಡಲಾಗದ ಸಂಗತಿಯಾಗಿದೆ: ಅದು ಕೇವಲ ಊಹೆಯಾಗಿರುತ್ತದೆ. ಅವರು ಮರಣ ಹೊಂದಿ ಪ್ರಸ್ತುತ ಎದ್ದು ಬಂದಿದ್ದರೆ, ಹೊಸ ಒಡಂಬಡಿಕೆಯ ಯೇಸುವಿನ ಪ್ರಕಾರ ಅವರು ನಿತ್ಯವಾಗಿ ಜೀವಿಸಲಾರರು. ಅವರ ಅನುಭವ ಸತ್ಯವಾಗಿದ್ದರೂ ಅದು ಸಮನಾಂತರದಲ್ಲಿ ಮುಂದುವರೆಯಲಾಗದ ಕೆಲವರು ಇಂತಹ ಮನುಷ್ಯರ ಊಹೆಗಳನ್ನು ನಂಬುವದೇ ವಿನಃ ದಾಖಲೆಗಳಿರುವ ಯೇಸುವಿನ ಪುನರುತ್ಥಾನವನ್ನು ನಂಬಲಾರರು.

ಯೇಸುವಿನ ಪುನರುತ್ಥಾನದ ಸಂಗತಿಯಲ್ಲಿ, “ಅದು ಅಸಾಧ್ಯ” ಎಂಬದೇ ಪ್ರಥಮ ಉತ್ತರವಾಗಿದೆ! ವೈಜ್ಞಾನಿಕವಾಗಿ ಅಸಾಧ್ಯ ಎಂಬದನ್ನೇ ದೃಢಿಕರಿಸುತ್ತೇವೆ. ದೈವೀಕ ವಿಚಾರಗಳು ಒಳಗೊಂಡಿರುವಾಗ, ಅದು ಅಸಾಧ್ಯವೇ ಎಂದು ನಿರ್ಣಯಿಸುತ್ತೇವೆ. ಯೇಸುವಿನ ಪುನರುತ್ಥಾನವನ್ನು ನಿರಾಕರಿಸುವದು, ದೇವರ ಅಸ್ತಿತ್ವವನ್ನೇ ನಿರಾಕರಿಸಿದಂತೆ. ಹೌದು ಕೆಲವರು ಇದನ್ನು ಮಾಡಿದ್ದಾರೆ. ದೇವರ ಅಸ್ತಿತ್ವದ ಸಾಧ್ಯತೆಯನ್ನು ಒಪ್ಪಿಕೊಳ್ಳುವಾಗ (ಶಾಸ್ತ್ರದ ಪ್ರಕಾರ ಒಪ್ಪಿಕೊಳ್ಳಲೇ ಬೇಕು) ಯೇಸುವಿನ ಪುನರುತ್ಥಾನದ ನಿರಾಕರಣೆ ಅಸಾಧ್ಯವಾಗಿದೆ. ದೇವರನ್ನು ನಂಬುವವನು, ಯೇಸುವಿನ ಪುನರುತ್ಥಾನವನ್ನು ಒಪ್ಪಿಕೊಳ್ಳುವನು. ಮುಂದಿನ ಹೆಜ್ಜೆ ಏನೆಂದರೆ, ಸಾಧ್ಯತೆಗಿಂತ ಸಾಧ್ಯವಾಗಿರಬಹುದು ಎಂಬುದಾಗಿದೆ. ಐತಿಹಾಸಿಕ ಹೇಳಿಕೆಯೇನೆಂದರೆ ಕಳೆದ ಸಮಯದಲ್ಲಿ ಜರುಗಿದ್ದ ಸಂಗತಿಗಳ ಸಾಕ್ಷಾಧಾರಗಳನ್ನು ಪುನಃ ನಿರ್ಮಾಣಮಾಡುವದು. ಯೇಸುವಿನ ಪುನರುತ್ಥಾನದ ಕುರಿತು ಆತನು ಎದ್ದು ಬಂದಿರುವದಕ್ಕೆ, ಸಾಕ್ಷಾಧಾರಗಳೇನು?

## ಈ ಪ್ರಶ್ನೆಯ ಪರಿಣಾಮವೇನು?

ಈ ಚರ್ಚೆಗೆ ಮೊದಲು ಈ ಪ್ರಶ್ನೆಯ ಪರಿಣಾಮವೇನು? ಇದರ ಉತ್ತರವು ನಮಗೆ ಎಷ್ಟು ಪ್ರಮುಖವಾಗಿದೆ? ಯೇಸುವಿನ ಜೀವನ ಹಾಗೂ ಮರಣದ ಕುರಿತ ಚರ್ಚೆಯನ್ನು ಮಾಡಿ, ಆತನ ಪುನರುತ್ಥಾನದ ಕುರಿತ ಗೊಂದಲದ ಚರ್ಚೆಯನ್ನು ಏಕೆ ಮುಂದುವರೆಸಬೇಕು? ಐತಿಹಾಸಿಕವಾಗಿ ಆತ್ಮೀಕವಾಗಿ ಯೋಚಿಸಿ, ಪುನರುತ್ಥಾನದ ಕುರಿತು ವ್ಯಕ್ತಿಗತ ವಿಚಾರಕ್ಕೆ ಏಕೆ ಬಿಡಬಾರದು? ಇವೆಲ್ಲವು ವಿಶೇಷ ಪ್ರಶ್ನೆಗಳೇ, ಅವುಗಳನ್ನು ಚರ್ಚಿಸುವ ಅಗತ್ಯವಿದೆ.

ನಾನು ಪದವಿ ಮಾಡುವ ಸಂದರ್ಭದಲ್ಲಿ, ಜರ್ಮನ್ನಿನ ದೈವಶಾಸ್ತ್ರ ಪಂಡಿತನೊಬ್ಬನು ಬರೆದಿದ್ದ ಪುನರುತ್ಥಾನದ ಕುರಿತ ವಿಷಯವನ್ನು ಮುಂದಿಟ್ಟುಕೊಂಡು (ಪುನರುತ್ಥಾನ ಉಂಟೋ ಅಥವಾ ಇಲ್ಲವೇ) ಇದರ ಚರ್ಚೆಯನ್ನು ನಾನು ಮಂಡಿಸಬೇಕಿತ್ತು. ಆ ಪಂಡಿತರು ಪುನರುತ್ಥಾನದ ಕುರಿತು ಸಾಧ್ಯ ಅಸಾಧ್ಯತೆಗಳನ್ನು ಏನೇಕ ಪುಟಗಳಲ್ಲಿ ಬರೆದಿದ್ದರು: ಅಂತಿಮ ವಾಗಿ ಅವರು ಯೇಸುವಿನ ಮರಣ, ಪುನರುತ್ಥಾನ ಪ್ರಮುಖವಲ್ಲ ಎಂಬ ನಿರ್ಣಯವನ್ನು ನೀಡಿದ್ದರು. ಅವರು ಬರೆದು ಮಂದುವರೆಸಿ, ಪುನರುತ್ಥಾನದ ಭಾನುವಾರ ಮುಂಜಾನೆ ಒಬ್ಬ ವಿಶ್ವಾಸಿಯು, ಪುನರುತ್ಥಾನದ ಕುರಿತು ತನ್ನ ಹೃದಯದಲ್ಲಿ ಆಲೋಚಿಸಲಿ, ಅದು ಸತ್ಯವಿರಲಿ

ಅಥವಾ ಅಸತ್ಯವಿರುವ ಈ ಆಲೋಚನೆಯ ನಿಮಿತ್ತ ನಾನು ದಿಗ್ಭ್ರಾಂತನಾದೆ. ಐತಿಹಾಸಿಕವಾದ ಯೇಸುವಿನ ಪುನರುತ್ಥಾನದ ಬಗ್ಗೆ ಒಬ್ಬನು ಇಷ್ಟು ಸರಳವಾಗಿ ಯೋಚಿಸಬಹುದೇ?

ಆ ಆಲೋಚನೆಯು ಅನಗತ್ಯ ಎಂದು ಹೇಳಿರಬಹುದೇ? ಇಂತಹ ಐತಿಹಾಸಿಕ ಹಾಗೂ ಒಂದು ಧರ್ಮದ ರಹಸ್ಯವನ್ನು ಒಬ್ಬ ಮೇಧಾವಿಯಾದ ಮನುಷ್ಯನು ಇಷ್ಟು ಅಲಕ್ಷ ವಾಗಿ ಹೇಳಬಹದೇ? ನೀಲ್ ಆರ್ಮ್‌ಸ್ಟ್ರಾಂಗ್‌ನು ಚದ್ರನ ಮೇಲೆ ನಡೆದ ಸಂಗತಿಯನ್ನು ನೆನಪು ಮಾಡಿಕೊಳ್ಳಿರಿ. ಅವನು ಚಂದ್ರನ ಮೇಲೆ ನಡೆದಿರಲಿ ಅಥವಾ ನಡೆಯದೆ ಇರಲಿ ಆದರೆ ನಡೆದನು ಎಂದು ಆಲೋಚನೆ ಮಾತ್ರವಿರಲಿ ಎಂದು ನಾವುಗಳು ಊಹಿಸಬಹುದೇ. ಯೇಸುವಿನ ಪುನರುತ್ಥಾನದ ವಿಚಾರದಲ್ಲೂ ಇದು ಸತ್ಯವಾಗಿದೆ. ಆತನು ಎದ್ದು ಬಂದನೇ, ಅಥವಾ ಎದ್ದು ಬರಲಿಲ್ಲವೇ ಅದು ಪ್ರಮುಖವಾದದ್ದು. ಆತನು ಎದ್ದು ಬಂದಿರುವನು ಎಂಬುದಕ್ಕೆ ಐತಿಹಾಸಿಕ ಸಾಕ್ಷ್ಯಾಧಾರಗಳು ಸ್ಫುಟವಾಗಿವೆ ಅಂದರೆ ಆತನು ಪುನರುತ್ಥಾನವಾದನು ಅಥವಾ ಆಗಲಿಲ್ಲ ಎಂಬುದನ್ನು ಸಾಭೀತುಪಡಿಸುತ್ತಿದ್ದೇವೆ ಎಂಬ ಅರ್ಥವಲ್ಲ, ಆದರೆ ಆ ಕುರಿತ ಸಾಧ್ಯತೆಗಳನ್ನು ತರ್ಕಿಸಬಹುದಾಗಿದೆ. ಈ ವಿಚಾರವನ್ನು ಅಲಕ್ಷಮಾಡಬಾರದು. ಪುನರುತ್ಥಾನ ಅಸಾಧ್ಯ ಎಂದು ಹೇಳುವದಾದರೆ, ಮಾನವ ಇತಿಹಾಸದ ಒಂದು ಪ್ರಮುಖ ತತ್ವವನ್ನು ಅಲ್ಲಗಳೆ ಯುವವರಾಗಿದ್ದೇವೆ. ಅಲ್ಲಗಳೆಯುವ ಜ್ಞಾನವು ನಮಗೆ ಇಲ್ಲದಿರಲಿ. ಇದನ್ನು ನಾವೇ ಏಕೆ ಗ್ರಹಿಸಬೇಕು? ಹೌದು ಇಂತಹ ಅಮೂಲ್ಯವಾದ ಸಂಗತಿಯನ್ನು ಅನ್ಯರು ಅಲ್ಲಗಳೆಯಬಾರದು! ದೇವರ ಮಕ್ಕಳು ಆತನ ಪುನುತ್ಥಾನದ ಮಹಾ ಸತ್ಯತೆಯನ್ನು ಆಹ್ವಾನಿಸಬೇಕು!

ಈ ಪ್ರಶ್ನೆಯಿಂದ ಉದ್ಭವಿಸಿದ ಪರಿಣಾಮದ ಕುರಿತು ಹೊಸ ಒಡಂಬಡಿಕೆಯ ಬರಹಗಾರರು ಪೂರ್ಣ ಜ್ಞಾನವನ್ನು ಹೊಂದಿದ್ದರು, ಎಂದು ಅವರ ಹೇಳಿಕೆಯಿಂದ ತಿಳಿದುಬರುತ್ತದೆ. ಪುನರುತ್ಥಾನದ ಸಂಗತಿಯು ಕ್ರೈಸ್ತರ ನಂಬಿಕೆಗೆ ಬುನಾದಿಯಾಗಿದೆ. ಪುನರುತ್ಥಾನದ ಸಂದೇಶವನ್ನು ಹೊರತುಪಡಿಸಿದರೆ, ಕ್ರೈಸ್ತರ ಸಂದೇಶವು ಹುರುಳಿಲ್ಲದ್ದಾಗುತ್ತದೆ. 1 ಕೊರಿಂಥ 15:3-5, ಮರಣ ಹೂಣಿಡುವಿಕೆ, ಪುನರುತ್ಥಾನವನ್ನು ಬರೆದು, ಮುಂದೆ ಸಂಭವಿಸಬಹುದಾದ ಪುನರುತ್ಥಾನದ ಕುರಿತು, "ಪ್ರಥಮ ಆಧ್ಯತೆಯನ್ನು" ನೀಡಲಾಗಿದೆ. ಅದನ್ನೇ ಅವನು ಕೊರಿಂಥದವರಿಗೆ ಬರೆದನು,

> ಕ್ರಿಸ್ತನು ಎದ್ದು ಬರಲಿಲ್ಲವಾದರೆ ನಮ್ಮ ಪ್ರಸಂಗವು ಹುರುಳಿಲ್ಲದ್ದು, ಮತ್ತು ನಿಮ್ಮ ನಂಬಿಕೆಯೂ ಹುರುಳಿಲ್ಲದ್ದು. ಇದಲ್ಲದೆ ಸತ್ತವರು ಎದ್ದು ಬರುವದಿಲ್ಲವೆಂಬದು ನಿಜವಾ ಗಿದ್ದ ಪಕ್ಷದಲ್ಲಿ ದೇವರು ಕ್ರಿಸ್ತನನ್ನು ಎಬ್ಬಿಸಲೇ ಇಲ್ಲ; ಎಬ್ಬಿಸಿದನೆಂದು ಸಾಕ್ಷಿ ಕೊಟ್ಟ ನಾವು ದೇವರ ವಿಷಯವಾಗಿ ಸುಳ್ಳುಸಾಕ್ಷಿ ಹೇಳಿದವರಾಗಿ ಕಂಡುಬಂದೆವು. ಸತ್ತವರು ಎದ್ದು ಬರುವದಿಲ್ಲವಾದರೆ ಕ್ರಿಸ್ತನೂ ಎದ್ದು ಬರಲಿಲ್ಲ. ಕ್ರಿಸ್ತನು ಎದ್ದುಬರಲಿಲ್ಲವಾದರೆ ನಿಮ್ಮ ನಂಬಿಕೆಯು ನಿಷ್ಪ್ರಯೋಜನವಾಗಿದೆ, ನೀವು ಇನ್ನೂ ನಿಮ್ಮ ಪಾಪಗಳಲ್ಲಿಯೇ ಇದ್ದೀರಿ. ಇದು ಮಾತ್ರವಲ್ಲದೆ ಕ್ರಿಸ್ತನವರಾಗಿ ನಿದ್ರೆ ಹೋದವರು ನಾಶವಾದರು (1 ಕೊರಿಂಥ 15:14-18).

ಪೌಲನು ತನ್ನ ಬೋಧನೆಗಳನ್ನು ಅಲಕ್ಷ್ಯದಿಂದ ತಿಳಿಸಲಿಲ್ಲ. ಪಾಪ ಪರಿಹಾರಕ್ಕಾಗಿ ಉಂಟಾದ ಕ್ರಿಸ್ತನ ತ್ಯಾಗವು - ಆತನ ಪುನರುತ್ಥಾನದಲ್ಲಿ ಅವಲಂಭನೆ ಹೊಂದಿರುತ್ತದೆ.

ಪುನರುತ್ಥಾನವಿಲ್ಲದ, ಕ್ರೈಸ್ತತ್ವವು ಸ್ಥಿರವಾಗಿರದು? ಅದು ಕ್ರಿಸ್ತನನ್ನು ಮಹಿಮೆಪಡಿಸಿ, ಉತ್ತಮವಾದ ಜೀವಿತವನ್ನು ಜೀವಿಸಲು ಸಹಾಯಿಸುತ್ತದೆ. ರೋಮಾಪುರ 1:1-4ರಲ್ಲಿ, ಆತನ ಪ್ರಸಂಗದಲ್ಲಿನ ಸುವಾರ್ತೆಯ ಗುರುತರವಾದ ಅಂಶವನ್ನು ಪೌಲನು ಪ್ರಕಟಿಸಿರುವನು.

> ... ಯೇಸು ಕ್ರಿಸ್ತನ ದಾಸನೂ ಅಪೊಸ್ತನಾಗುವದಕ್ಕೆ ಕರೆಯಲ್ಪಟ್ಟವನೂ ದೇವರ ಸುವಾರ್ತೆಯನ್ನು ಸಾರುವದಕ್ಕೆ ನೇಮಿಸಲ್ಪಟ್ಟವನೂ ಆಗಿರುವ ಪೌಲನು ರೋಮಾಪುರದಲ್ಲಿ ದೇವರಿಗೆ ಪ್ರಿಯರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ

> ಆಗಿರುವವರೆಲ್ಲರಿಗೆ ಬರೆಯುವದೇನಂದರೆ - ನಮ್ಮ ತಂದೆಯಾಗಿರುವ ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಶಾಂತಿಯೂ ಆಗಲಿ. ಸುವಾರ್ತೆಯನ್ನು ಸಾರಿ ಹೇಳಿಸುತ್ತೇನೆಂದು ದೇವರು ಮುಂಚಿತವಾಗಿ ಪವಿತ್ರಶಾಸ್ತ್ರಗಳಲ್ಲಿ ತನ್ನ ಪ್ರವಾದಿಗಳ ಮೂಲಕ ಮಾತುಕೊಟ್ಟನು. ಈ ಸುವಾರ್ತೆಯು ದೇವರ ಮಗನೂ ನಮ್ಮ ಕರ್ತನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದದ್ದು. ಆತನು ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದವನೂ, ಪವಿತ್ರವಾದ ಆತ್ಮವುಳ್ಳವನಾಗಿದ್ದು ಸತ್ತಮೇಲೆ ಜೀವಿತನಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ.

ಪುನರುತ್ಥಾನದ ನಿಮಿತ್ತ ಯೇಸು *ದೇವರ ಮಗನೆನಿಸಿಕೊಂಡನು* ಎಂಬ ತತ್ವವನ್ನು ಪೌಲನು ಏಕೆ ಬರೆದನು (ಒತ್ತಿ ಹೇಳಿದ್ದು ನನ್ನದು) ಹೌದು ಆತನು ಮರಣದಿಂದ ಎದ್ದು ಬಂದ ನಿಮಿತ್ತ ಆತನು ದೇವರ ಮಗನಾದನು ಎಂಬದು ಕೆಲವರ ನಿರ್ಣಯ ಇದು ಪೌಲನ ಸಂದೇಶವಲ್ಲ, ಪುನರುತ್ಥಾನವು ಯೇಸುವನ್ನು ದೇವರ ಮಗನನ್ನಾಗಿ ಮಾಡಲಿಲ್ಲ. ಪೌಲನ ಪ್ರಕಾರ, ಅದು ಆತನನ್ನು ದೇವರ ಮಗನೇ ಎಂದು ಸಾಭೀತುಪಡಿಸಿತು, ಯೇಸು ಏನಾಗಿದ್ದನು ಎಂಬುದಕ್ಕೆ ಅದು ಪುರಾವೆಯಾಯಿತು ಏಕೆಂದರೆ - ಪೌಲನು ತಾನೇ, ಪುನರುತ್ಥಾನ ಹೊಂದಿದ ಯೇಸುವನ್ನು ಮುಖಾ ಮುಖಿಯಾಗಿ ನೋಡಿದ್ದರಿಂದ, ಆನೇಕ ಇಸ್ರಾಯೇಲ್ಯರ ಮೆಸ್ಸೀಯನು ಎಂದು ಸತ್ಯವಾಗಿ ಅರಿತುಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 9:1-5; 1 ಕೊರಿಂಥ 9:1).

ಯೇಸುವಿನ ಪುನರುತ್ಥಾನದ ಕುರಿತು ಪೌಲನು ಮಾತ್ರ ಅರಿತವನಾಗಿರದೆ, ಅಪೊಸ್ತಲರ ಕೃತ್ಯಗಳು 2:14-36, "ಕ್ರೈಸ್ತರ ಪ್ರಥಮ ಆಧ್ಯತೆ ಎಂದು ಕರೆಯಲಾಗಿದೆ" ಯೇಸು ಕ್ರೂಜಿತನಾಗಿ ಪುನರುತ್ಥಾನ ಹೊಂದಿದ ನಂತರ, ಯೇಸುವಿನ ಅಸ್ತಿತ್ವದ ಕುರಿತು ಪ್ರಸಂಗಿಸಿದ ಪ್ರಥಮ ಪ್ರಸಂಗವಾಗಿದೆ. ಇದನ್ನು ಪೇತ್ರನು ಪ್ರಸಂಗಿಸಿದನು. ಪಂಚಾಶತ್ತಮ ದಿನದಂದು ಯೆರೂಸಲೇಮಿನಲ್ಲಿ ಸೇರಿಬಂದಿದ್ದ ಯೆಹೂದ್ಯರಿಗೆ ಈ ಸಂಗತಿಗಳನ್ನು ಪ್ರಕಟಿಸಿದ ನಂತರ (2:1-13), ಮೆಸ್ಸೀಯನ ಕುರಿತು ನೆರವೇರಿದ ಪ್ರವಾದನೆಯನ್ನು ಯೋವೇಲ 2:28ರ, ಯೇಸುವಿನ ಕುರಿತಾದ ನೆರವೇರಿಕೆಯನ್ನು ತರ್ಕಿಸಲಾಯಿತು (ಅಪೊಸ್ತಲರ ಕೃತ್ಯಗಳು 2:22). ಯೇಸುವಿನ ಜೀವನ ಹಾಗೂ ಮರಣದ ವಿಚಾರದಿಂದ, ಪೇತ್ರನು ಬಹಳ ವೇಗವಾಗಿ ಪುನರುತ್ಥಾನದ ಕರಿತು ತಿಳಿಸಿರುವದನ್ನು ಗಮನಿಸಿರಿ (2:22, 23), ಖಂಡಿತವಾಗಿಯೂ ಈ ವಿಷಯವೇ ಅವನ ಪ್ರಸಂಗದ ಮುಖ್ಯಾಂಶವಾಯಿತು. ಕೀರ್ತನೆ 16ರ ಪ್ರವಾದನೆಯನ್ನು ಸ್ಪಷ್ಟವಾಗಿ ಚರ್ಚಿಸಲಾಗಿದೆ. ಅಲ್ಲಿ ಒಬ್ಬಾತನು ಪುನರುತ್ಥಾನ ಹೊಂದಿದ್ದಾನೆ: "ಯಾಕಂದರೆ ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲ. ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡಗೊಡಿಸುವದಿಲ್ಲ" (2:27). ಇಲ್ಲಿ ದಾವೀನು ತನ್ನ ಬಗ್ಗೆ ಮಾತನಾಡಿರುವದಿಲ್ಲ, ಯಾಕೆಂದರೆ ಅವನು ಸತ್ತು ಸಮಾದಿಗೊಂಡಿದ್ದಾನೆ, ಅವನ ಸಮಾದಿಯ ಸ್ಥಳವು ಇನ್ನು ಅಸ್ತಿತ್ವದಲ್ಲಿದೆ. ದಾವೀದನು, ಪುನರುತ್ಥಾನ ಹೊಂದಿದ ಕ್ರಿಸ್ತನ (ಮೆಸ್ಸೀಯನ) ಕುರಿತು ಮಾತನಾಡಿರುವದು ಖಚಿತ (2:31). ನಂತರದಲ್ಲಿ, "ಆದದರಿಂದ ನೀವು ಶಿಲುಬೆಗೆ ಹಾಕಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ, ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು" (2:36). ಪುನರುತ್ಥಾನದ ನಿಮಿತ್ತ ಯೇಸು ಒಡೆಯನು ಹಾಗೂ ಕ್ರಿಸ್ತನು ಆಗಿದ್ದಾನೆ (ಮೆಸ್ಸೀಯ). ಪುನರುತ್ಥಾನವಿಲ್ಲದಿದ್ದರೆ, ಆತನು ನಟನೆ ಮಾಡಿದ ಮತ್ತೊಬ್ಬ ಮೆಸ್ಸೀಯನಾಗುತ್ತಿದ್ದನು.

ಕ್ರೈಸ್ತತ್ವವು ಆತನು ಪುನರುತ್ಥಾನ ಹೊಂದಿರುವನು ಅಥವ ಹೊಂದಿರುವದಿಲ್ಲ ಎಂಬ ಅಂಶದ ಮೇಲೆ ಅವಲಂಭಿತವಾಗಿರುವದಿಲ್ಲ, ಆದರೆ ಅನೇಕ ಕ್ರೈಸ್ತರು ಈ ಸತ್ಯಾಂಶವನ್ನು ತಿಳಿಯದೆ ಇರುವದು ದೊಡ್ಡ ಗಂಡಾತರವೇ.

## ಸಾಕ್ಷಾಧಾರಗಳು ಎಲ್ಲಿವೆ?

ಯೇಸುವಿನ ಪುನರುತ್ಥಾನದ ಕುರಿತ ಪ್ರಶ್ನೆಯನ್ನು ಪುನಃ ಗಮನಿಸೋಣ. ಆತನು ಬಹುಶಃ ಪುನರುತ್ಥಾನ ಹೊಂದಿರಬಹುದು ಎಂಬುದಕ್ಕೆ ಸಾಕ್ಷಾಧಾರಗಳಿವೆಯೇ?[1]

### ಪುರಾತನ ಕಾಲದ ಸಾಕ್ಷಿಗಳು

ಹೊಸ ಒಡಂಬಡಿಕೆಯ ಸಾಕ್ಷಿಯ ಮೂಲಗಳನ್ನು ಹೊಂದಿರುತ್ತದೆ. ಯೇಸು ಪುನರುತ್ಥಾನ ಹೊಂದಿರುವನು ಎಂದು ಪುರಾತನ ದಾಖಲೆಗಳಿವೆ. ಯೇಸು ಎದ್ದು ಬಂದನು ಎಂದು ನಾಲ್ಕು ಸುವಾರ್ತೆಗಳು ಸಹ ತಿಳಿಸುತ್ತವೆ. ಅಪೊಸ್ತಲರು ನಮ್ಮ ಪ್ರಸಂಗಗಳಲ್ಲಿ ಸಹ ಯೇಸುವಿನ ಪುನರುತ್ಥಾನವನ್ನು ತಿಳಿಸಿರುವರು, ಹಾಗೂ ಪೌಲನು ಸಹ ಇದನ್ನೇ ಬರೆದಿರುವನು (1 ಕೊರಿಂಥ 15; ರೋಮಾಪುರ 1:1-4). ಸುವಾರ್ತೆಗಳನ್ನು ಬರೆಯುವ ಇಪ್ಪತ್ತೈದು ವರ್ಷಗಳ ಹಿಂದೆಯೇ ಪೌಲನು ಪುನರುತ್ಥಾನದ ವಿಚಾರಕ್ಕೆ ಹೆಚ್ಚು ಆದ್ಯತೆ ನೀಡಿರುವನು. ಕ್ರಿಸ್ತನು ಮರಣದಿಂದ ಎದ್ದು ಬರದೇ ಇದ್ದರೆ ಕ್ರೈಸ್ತತ್ವವು ಹುರುಳಿಲ್ಲದ್ದು (1 ಕೊರಿಂಥ 15) ಎಂದಿರುವನು. ಕ್ರಿ.ಶ. 51-52ರಲ್ಲಿ ಪೌಲನು "ಯೇಸು ಸತ್ತು ಜೀವಿತನಾಗಿ ಎದ್ದನೆಂದು ನಾವು ನಂಬಿದ ಮೇಲೆ, ಅದರಂತೆ ಯೇಸುವಿನಲ್ಲಿದ್ದುಕೊಂಡು ನಿದ್ರೆಹೋಗುವವರನ್ನು ಸಹ ದೇವರು ಆತನೊಡನೆ ಕರೆದುಕೊಂಡು ಬರುವನೆಂದು ನಂಬಬೇಕಲ್ಲವೇ" 1 ಥೆಸಲೋನಿಕ 4:14: ಸುವಾರ್ತೆಗಳನ್ನು ಬರೆದ ಕಾಲದಲ್ಲಿ "ಪುನರುತ್ಥಾನದ" ಕಥೆಯು ಆದಿ ಸಭೆಯಲ್ಲಿ ಉಂಟಾಯಿತು ಎಂಬ ಪ್ರತೀತಿ ಇದೆ. ಈ ಘಟನೆ ನಡೆದು, ನಾಲ್ವತ್ತು ಅಥವಾ ಅದಕ್ಕಿಂತ ನಂತರದಲ್ಲಿ ಬರೆದಿರಬಹುದು. ಇಂತಹ ಘಟನೆಯನ್ನು ಇಷ್ಟು ಅಲ್ಪಾವದಿಯಲ್ಲಿ ಒಪ್ಪಿಕೊಳ್ಳುವದೆ ಅಸಾಧ್ಯ - ಆದರೆ ಯೇಸುವಿನ ಮರಣವಾದ ಇಪ್ಪತ್ತೈದು ವರ್ಷಗಳ ನಂತರದಲ್ಲಿ ಪೌಲನು ಯೇಸುವಿನ ಮರಣ ಪುನರುತ್ಥಾನದ ಕುರಿತು ಬರೆದನು. ಪಂಚಾಶತ್ತಮದಿನದಂದು ಆ ಘಟನೆಯನ್ನು ನೋಡಿದವರು ಈ ಸಮಯದಲ್ಲಿ ಇನ್ನು ಜೀವಂತವಾಗಿದ್ದರಿಂದ, ಯೇಸುವಿನ ಪುನರುತ್ಥಾನವಾಗದೆ, ಇದ್ದಿದ್ದರೆ, ಆತನ ದೇಹವನ್ನು ಪುನರುತ್ಥಾನ ಎಂದು ಹೇಳಿದ ನಂತರವೂ, ನೋಡಿರಬಹುದಲ್ಲವೇ. ಈ ಪುನರುತ್ಥಾನದ ಕುರಿತು ಪೌಲನು "ತರುವಾಯ ಒಂದೇ ಸಮಯದಲ್ಲಿ ಐನೂರು ಮಂದಿಗಿಂತ ಹೆಚ್ಚು ಸಹೋದರರಿಗೆ ಕಾಣಿಸಿಕೊಂಡನು" (1 ಕೊರಿಂಥ 15:6). ಕಣ್ಣಾರೆ ಕಂಡವರು ಇನ್ನೂ ಜೀವಂತವಾಗಿದ್ದರು. ಆದ್ದರಿಂದ ಅವರನ್ನು ಕೇಳಿರಿ ಎಂಬುದು ಪೌಲನ ಹೇಳಿಕೆಯಾಗಿದೆ! ಒಂದು ವೇಳೆ ಪೌಲನ ಬರವಣಿಗೆ ಸತ್ಯವಾಗಿರದಿದ್ದರೆ, ಅವನು ಈ ಹೇಳಿಕೆಯನ್ನು ಹೇಳುತ್ತಿರಲಿಲ್ಲ.

ಯೇಸು ಪುನರುತ್ಥಾನ ಹೊಂದಿದನು ಎಂದು ಪುನರುತ್ಥಾನ ಕಾಲದ ಸಕಲ ಮೂಲಗಳು ತಿಳಿಸುತ್ತವೆ, ಪುನರುತ್ಥಾನ ಹೊಂದಲಿಲ್ಲ ಎಂದು ಅವುಗಳು ತಿಳಿಸುವದಲ್ಲ. ಈ ಕಾರಣದಿಂದ ಪುನರುತ್ಥಾನವಿಲ್ಲದ ಕ್ರೈಸ್ತತತ್ವವು ಇದ್ದಿದ್ದರೆ, ಹೊಸ ಒಡಂಬಡಿಕೆಯ ಬರಹಗಾರರಲ್ಲಿ ಒಬ್ಬರಾದರೂ ಅದನ್ನು ತಿಳಿಸುತ್ತಿದ್ದರು.[2]

### ಯೇಸುವಿನ ಹೂಣಿಡುವಿಕೆ

ಆತನು ಕ್ರೂಜಿತನಾದ ಮೇಲೆ ಸಮಾಧಿಯಾದ ಸಂಗತಿಯು ನಮಗೆ ಪ್ರಮುಖವಲ್ಲದಿದ್ದರೂ, ಹೊಸ ಒಡಂಬಡಿಕೆ. ಬರಹಗಾರರಿಗೆ ಅದು ಪ್ರಮುಖವಾಗಿತ್ತು. ಆತನ ಹೂಣಿಡುವಿಕೆಯ ಕುರಿತು ನಾಲ್ಕು ಸುವಾರ್ತೆಗಳಲ್ಲೂ ಬರೆಯಲಾಗಿದೆ (ಮತ್ತಾಯ 27:57-61; ಮಾರ್ಕ 15:42-47; ಲೂಕ 23:50-56; ಯೋಹಾನ 19:38-42). ಮೂಲ ಪುರಾವೆಗಳ ಪ್ರಕಾರ, ಯೆಹೂದ್ಯರ ಪದ್ಧತಿಯ ಮೆರೆಗೆ ಆತನನ್ನು ಹೂಣಿಟ್ಟರು. ಶವವನ್ನು ಹೂಣುವ ಮೊದಲು ಅದನ್ನು ತೊಳೆದು, ಅದಕ್ಕೆ ಸುಗಂದ ದ್ರವ್ಯಗಳನ್ನು ಲೇಪಿಸಿ, ಬಟ್ಟೆಯಿಂದ ಸುತ್ತಿಡುತ್ತಿದ್ದರು (ಮಾರ್ಕ 16:1; ಲೂಕ 24:1). ಯೇಸುವಿನ ದೇಹವನ್ನು

ನೋಡಲು ಸಮಾಧಿಗೆ ಹೋದ ಸ್ತ್ರೀಯರು ಸಹ ಸುಗಂಧ ದ್ರವ್ಯಗಳನ್ನು ಕೊಂಡೊಯ್ದಿದ್ದರು. ಸಬ್ಬತ್ ಆರಂಭವಾಗುತ್ತಿದ್ದ ಕಾರಣ, ಯೇಸುವನ್ನು ತುರಾ ತುಳಿಯಲ್ಲಿ ಸಮಾದಿ ಮಾಡಿದ್ದರು, ಯಾಕೆಂದರೆ ಅವರಿಗೆ ಸಮಯದ ಅಭಾವವಿತ್ತು (ಯೋಹಾನ 19:41, 42). ಬಂಡೆಗಳಲ್ಲಿ, ಕೊರೆದು ಸಮಾಧಿಗಳನ್ನು ನಿರ್ಮಿಸುತ್ತಿದ್ದರು. ಅಂತಹ ಅನೇಕ ಸಮಾಧಿಗಳೂ ಇಂದಿಗೂ ಸಹ ಪಾಲಿಸ್ತೇನಿನಲ್ಲಿ ಅಸ್ತಿತ್ವದಲ್ಲಿರುತ್ತವೆ. ಯೇಸು ಸಮಾದಿ ಹೊಂದಿದ ವಿಚಾರವನ್ನು ಸುವಾರ್ತೆಗಳಲ್ಲಿ ಗಮನಿಸಿದಂತೆ, ಇತರೆ ಮೂಲಗಳಿಂದಲೂ ಅರಿಯುತ್ತೇವೆ.

ಸುವಾರ್ತೆಗಳಲ್ಲಿ ಈ ವಿಚರಾದ ಕುರಿತು ಬಹಳವಾಗಿ ಬರೆದಿರುವದರಿಂದ ಹೊಸ ಒಡಂಬಡಿಕೆಯ ಬರಹಗಾರರು ಈ ಸಂಗತಿಗೆ ಬಹಳ ಆಧ್ಯತೆ ನೀಡಿದ್ದರು ಎಂಬುದನ್ನು ಅರಿಯುತ್ತೇವೆ. ಪೌಲನು ಪ್ರಸಂಗಿಸಿ, ಯೇಸು ಹೂಣಲ್ಪಟ್ಟನು ಎಂದು ತಿಳಿಸಿರುವನು (1 ಕೊರಿಂಥ 15:4). ಹೂಣಿಡುವಿಕೆ ಪುನರುತ್ಥಾನಕ್ಕೆ ಪುರಾವೆಯಾಗಿದೆ ಏಕೆ?

ಗುಣಲಕ್ಷಣಗಳನ್ನು ಅರಿಯುವದು ಅಸಾಧ್ಯವಲ್ಲ. ಯೇಸುವಿನ ಹೂಣಿಡುವಿಕೆಯು ಆತನ ಮರಣಕ್ಕೆ ಪುರಾವೆಯಗಿದೆ, ಅದು ಆತನ ಪುನರುತ್ಥಾನವನ್ನು ಪರಿಚಯ ಮಾಡುತ್ತದೆ. ಯೇಸು ದೈಹೀಕವಾಗಿಸತ್ತನು ಎಂಬ ವಿಚಾರವು ಆತನು ಪುನರುತ್ಥಾನ ಹೊಂದಿದನು ಎಂಬ ಹೊಸ ಒಡಂಬಡಿಕೆಯ ಪುನರುತ್ಥಾನ ಎಂಬ ಅರ್ಥವನ್ನು ನೀಡುತ್ತದೆ. ಅದು ಕೇವಲ ಆತ್ಮೀಕ ಪುನರುತ್ಥಾನವಾಗದೇ (ಅರ್ಥವೇನೇ ಇರಲಿ) ಆತನು ಈ ಹಿಂದೆ ದೈಹೀಕವಾಗಿ ಎದಿದ್ದನು ಎಂಬ ಅರ್ಥವಾಗಿದೆ. ಪುನರುತ್ಥಾನದ ಕುರಿತು ಉದ್ಭವಿಸಬಹುದಾದ ಪ್ರಶ್ನೆಗೆ, ಪುರಾತನ ಬರಹಗಾರರು ಉತ್ತರವನ್ನು ನೀಡಿರುವರು: ಅದು, ಆತನು ನಿಜವಾಗಿ ಸಾಯದೆ ಆತನನ್ನು ಸಮಾಧಿಗೆ ತೆಗೆದುಕೊಂಡು ಹೋದ ನಂತರ, ಪುನಚೇತನ ಹೊಂದಿದನು ಎಂಬ ಪ್ರಶ್ನೆ ಇರಬಹುದು. ಒಂದು ವೇಳೆ, ಅಲ್ಲಿ ಆಧುನಿಕವಾದ ವೈಧ್ಯನು ಇದ್ದು, ಅವನಲ್ಲಿ ವೈದ್ಯಕೀಯ ಪರಿಕರಗಳು ಇದ್ದಲ್ಲಿ, ಅವನು ಯೇಸುವಿನ ದೇಹವನ್ನು ಪರಿಶೀಲಿಸಿ, ಆತನು ಸತ್ತಿರುವನು ಎಂದು ದೃಢಪಡಿಸುತ್ತಿದ್ದನು; ಆತನ ಎದೆ ಬಡಿತವು ನಿಂತುಹೋಗಿ ಮೆದುಳಿನ ಚಟುವಟಿಕೆಯು ಸ್ಥಬ್ಧವಾಗಿ, ಉಸಿರು ನಿಂತು ಹೋಗಿರುವದನ್ನು ದೃಢಪಡಿಸುತ್ತಿದ್ದನು. ಯೇಸು ಸತ್ತು ಹೂಣಲ್ಪಟ್ಟದ್ದರಿಂದ, ಆತನ ಪುನರುತ್ಥಾನದ ಹಾದಿ ಸುಗಮವಾಯಿತು.

ಆತನು ಹೂಣಲ್ಪಟ್ಟದ್ದರಿಂದ, ಆತನ ದೇಹಕ್ಕೆ ಒಂದು ಸಂಗತಿ ನಡೆಯಿತು. ಒಂದು ವೇಳೆ ಯೇಸುವಿನ ದೇಹವು ಸಮಾಧಿಯಲ್ಲೇ ಇದ್ದಿದ್ದಾದರೆ, ಯೆಹೂದ್ಯ ಅಧಿಕಾರಿಗಳು - ಅಥವಾ - ಪಿಲಾತನು, ಆತನ ದೇಹವನ್ನು ತೋರಿಸಿ, ಕ್ರೈಸ್ತತ್ವದ ಆದಿಯನ್ನೇ ನಿರ್ನಾಮ ಮಾಡುವ ಸಾಧ್ಯತೆಯಿತ್ತು. ಆದರೆ ಅವರು ಅದನ್ನು ಸಾಧಿಸಲು ಅಸಾಧ್ಯವಾಯಿತು - ಆಶ್ಚರ್ಯವಲ್ಲವೇ.

**ಖಾಲಿಯಾದ ಸಮಾಧಿ**

ಯೇಸುವಿನ ಸ್ನೇಹಿತರು ಹಾಗೂ ಆತನ ವೈರಿಗಳು ಸಹ ಯೇಸುವಿನ ಸಮಾದಿ ಖಾಲಿಯಾಗಿತ್ತು ಎಂದು ತಿಳುಕೊಂಡರು. ಭಾನುವಾರ ಮುಂಜಾನೆ ಸ್ತ್ರೀಯರು ಸಮಾಧಿಗೆ ತೆರಳಿದಾಗ, ಅದು ಖಾಲಿಯಾಗಿರುವದನ್ನು ಕಂಡುಕೊಂಡರು. ಅವರು ಬಳಸದೇ ಇದ್ದರೆ ಸಮಾಧಿಯ ಬಳಿಗೆ ತೆರಳಿದ್ದರೆ? ಇದಕ್ಕೆ ಪ್ರತ್ಯುತ್ಯರವಾಗಿ ಮಾರ್ಕ 15:47ರಲ್ಲಿ ಬರೆದದೆ, ಮಾರ್ಕ 15:47: "ಮಗ್ದಲದ ಮರಿಯಳೂ ಯೋಸೆಯ ತಾಯಿಯಾದ ಮರಿಯಳೂ ಆತನನ್ನಿಡುವ ಸ್ಥಳವನ್ನು ನೋಡಿದರು" ಲೂಕ 23:55 "ಹೀಗಿರುವಲ್ಲಿ ಗಲಿಲಾಯದಿಂದ ಆತನ ಸಂಗಡ ಬಂದಿದ್ದ ಸ್ತ್ರೀಯರು ಜೊತೆಯಲ್ಲಿ ಹಿಂದೆಯೇ ಹೋಗಿ ಆ ಸಮಾಧಿಯನ್ನೂ ಆತನ ದೇಹವನ್ನಿಟ್ಟ ರೀತಿಯನ್ನೂ ನೋಡಿ ಹಿಂತಿರುಗಿ ಬಂದು ಪರಿಮಳ ದ್ರವ್ಯಗಳನ್ನೂ ಸುಗಂಧತೈಲವನ್ನೂ ಸಿದ್ಧಮಾಡಿಕೊಂಡರು."

ಈ ಎರಡು ವಾಕ್ಯ ಭಾಗದಲ್ಲೂ, ಅವರು ತಪ್ಪಾದ ಸಮಾಧಿಗೆ ಹೋಗಿರಬಹುದೆಂಬ

ಸಂದೇಹವನ್ನು ಉಂಟು ಮಾಡುತ್ತದೆ, ಏಕೆಂದರೆ ಅವರು ಮೊಬ್ಬಿರುವಾಗ ಆ ಸ್ಥಳಕ್ಕೆ ಹೋಗಿದ್ದರು. ಖಾಲಿಯಾದ ಸಮಾದಿಯ ಬಗ್ಗೆ ಕೆಲವು ಸ್ಪಷ್ಟತೆಯನ್ನು ನೀಡಲೇಬೇಕು, ಅದು ಸಹಜವಾದ ಸಂಗತಿಯಲ್ಲವೇ? ಅರ್ಲಿಂಗ್‌ಟನ್‌ನಲ್ಲಿರುವ ಜಾನ್ ಕೆನೆಡಿಯವರ ಸಮಾಧಿಯು ಖಾಲಿಯಾಗಿದೆ ಎಂದು ಅಲ್ಲಿನ ಅಧಿಕಾರಿಗಳು ದೃಢಪಡಿಸುವದಾದರೆ, ಆ ದೇಹ ಎಲ್ಲಿ ಹೋಯಿತು ಎಂಬ ಬಗ್ಗೆ ಪರಿಶೀಲನೆ ಮಾಡುವದಿಲ್ಲವೇ? ಸಾಧ್ಯವಾಗುವ ಸಕಲ ಮಾರ್ಗಗಳ ಮೂಲಕ ಆ ದೇಹವನ್ನು ಕಂಡು ಹಿಡಿಯುವದಿಲ್ಲವೇ. ಅದು ಎಲ್ಲೋ ಒಂದು ಸ್ಥಳದಲ್ಲಿ ಇರಬೇಕಲ್ಲವೇ. ಯೇಸುವಿನ ದೇಹದ ಕುರಿತಾಗಿಯು ಸಹ, ಅದು ಸಮಾಧಿಯಲ್ಲಿಲ್ಲದಿದ್ದರೆ, ಅದು ಇನ್ಯಾವ ಸ್ಥಳದಲ್ಲಿತ್ತು?

ಪುನರುತ್ಥಾನದ ಕುರಿತು ವಿರೋಧ ತೋರ್ಪಡಿಸುವದಕ್ಕಾಗಿ, ಅಪೊಸ್ತಲರು ಪುನರುತ್ಥಾನದ ಕುರಿತು ಪ್ರಸಂಗಿಸಿದಾಗ, ಖಾಲಿಯಾದ ಸಮಾಧಿಯ ಬಗ್ಗೆ ಪ್ರಸಂಗಿಸಿರುವದಿಲ್ಲ ಎಂದು ಸಹ ಹೇಳಲಾಗಿದೆ. ಇದು ಪ್ರಸ್ತುತ ಸಮಸ್ಯೆಯಾಗಿದ್ದು, ಪುರಾತನ ಕ್ರಿಯೆಯಾಗದೆ ಇರುವದರಿಂದ ಚರ್ಚೆಗೆ ನಿಲುಕಲಾರದ ಸಂಗತಿಯಾಗಿದೆಯಷ್ಟೆ. ಅಂದರೆ ಪಂಚಾಶತ್ತಮದಿನದಂದು ಪೇತ್ರನು ಮಾಡಿದ ಪ್ರಸಂಗವನ್ನು ಗಮನಿಸಿರಿ (ಅಪೊಸ್ತರ ಕೃತ್ಯಗಳು 2:22-36). ಕೀರ್ತನೆ 16ರ ಆಧಾರದಿಂದ ಯಾಕಂದರೆ, ನಿನ್ನ ಪ್ರಿಯನಿಗೆ ಕೊಳೆಯುವ ಅವಸ್ಥೆಯನ್ನು ನೋಡ ಗೊಡಿಸುವದಿಲ್ಲ. ಸಹೋದರರೇ ಮೂಲ ಪಿತೃವಾದ ದಾವೀದನ ವಿಷಯದಲ್ಲಿ ನಾನು ಧೈರ್ಯದಿಂದ ನಿಮ್ಮ ಸಂಗಡ ಮಾತಾಡಬಹುದು. ಏನೆಂದರೆ - ಅವನು ತೀರಿಹೋಗಿ ಹೂಣಲ್ಪಟ್ಟನು (ಅಪೊಸ್ತಲರ ಕೃತ್ಯಗಳು 2:29), ಆದರೆ ಯೇಸುವಿನ ಸಮಾಧಿ ಖಾಲಿಯಾಗಿದೆ. ಅದರ ಸಂಗಡ, ಪುನರುತ್ಥಾನಗೊಂಡ ಕ್ರಿಸ್ತನಿಗೆ ಅಪೊಸ್ತಲರು ಸಹ ಸಾಕ್ಷಿಯಾಗಿದ್ದಾರೆ. ಖಾಲಿಯಾದ ಸಮಾಧಿಯು ಪರಿಣಾಮಕಾರಿಯಾದ ಸಾಕ್ಷಿಯಾಗಿರುವದಿಲ್ಲ.

ಖಾಲಿಯಾದ ಸಮಾಧಿಯ ಕುರಿತ ಚರ್ಚೆಯು ಕಾಲ್ಪನಿಕದಿಂದ, ಬಹು ದೂರ ಸಾಗಿರುತ್ತದೆ. ಪಂಡಿತರುಗಳಲ್ಲೂ ಸಹ ಈ ಚರ್ಚೆಯು ಸ್ಪಷ್ಟಗೊಂಡಿರುವದಿಲ್ಲ. ಯೇಸು ಪುನರುತ್ಥಾನ ಹೊಂದಿದ್ದಾನೆ ಎಂಬುದನ್ನು ನಿರೂಪಿಸಲು, ಆತನ ದೇಹವನ್ನು ಇತರೆ ಸ್ಥಳಕ್ಕೆ ಸಾಗಿಸಲಾಯಿತು ಎಂಬ ತರ್ಕದ ವಿಚಾರದಲ್ಲಿ: ಖಾಲಿಯಾದ ಸಮಾಧಿಯನ್ನೇ ಸಾಕ್ಷಿ ಎಂದು ಪರಿಗಣಿಸಿದ್ದಾರೆ. ಆತನು ಪುನರುತ್ಥಾನ ಹೊಂದಿದ್ದಾನೆ ಎಂದು ತೋರಿಸಿ ಕೊಡಲು ಆತನ ಶಿಷ್ಯರ, ಯೇಸುವಿನ ದೇಹವನ್ನು ಸಾಗಿಸಿದ, ಕಾರಣದಿಂದ ಶಿಷ್ಯರು ಸಹ ತಮ್ಮ ಪ್ರಾಣವನ್ನು ಕಳಕೊಂಡರು ಎಂಬ ಹೇಳಿಕೆಯಿದೆ. ಸಮಾಧಿಯಲ್ಲಿ ಹೂಣಿಟ್ಟ ಯೇಸು ಸತ್ತಿರಲಿಲ್ಲ. ತಣ್ಣಗಿನ ಸಮಾಧಿಯಲ್ಲಿ ಆತನು ಚೇತರಿಸಿಕೊಂಡು ಎದ್ದನು ಎಂಬದು ಧೋರಣೆಯಾಗಿರುವದರಿಂದ ಅದು ಚರ್ಚೆಯ ಸಂಗತಿಯಲ್ಲ ಎಂದು ಹೇಳಲಾಗಿದೆ.

ಯೇಸುವಿನ ದೇಹವನ್ನು ಸಮಾಧಿಯಲ್ಲಿ ಇಡಲೇ ಇಲ್ಲ ಎಂಬ ಸಿದ್ಧಾಂತವನ್ನು ಜೀಸಸ್ ಸೆಮಿನಾರಿನ ಜಾನ್ ಡಾಮ್ನಿಕ್ ಕ್ರಾಸಸ್ ಪ್ರತಿಪಾದಿಸಿದ್ದಾನೆ. ಈ ವಿಚಾರವನ್ನು ಅವನು ಊಹಿಸಿಕೊಂಡು ಯೇಸುವಿನ ಸ್ನೇಹಿತರು, ಯೇಸುವಿನ ದೇಹಕ್ಕೆ ಸರಿಯಾದ ಸಮಾಧಿ ಮಾಡಬಾರದೆಂದು, ಯೇಸುವಿನ ವೈರಿಗಳು, ಆತನ ದೇಹವನ್ನು ಅವರಿಗೆ ನೀಡಲಿಲ್ಲ ಆದ್ದರಿಂದ ಆತನ ದೇಹವನ್ನು ಒಂದು ತಗ್ಗಿನಲ್ಲಿ ಹಾಕಲಾಗಿ, ನಾಯಿಗಳು ಆತನ ದೇಹವನ್ನು ತಿಂದುಹಾಕಿದವು[3] ಎಂದು ತಿಳಿಸಿದ್ದಾನೆ. ಈ ವಿಚಾರಕ್ಕೆ ತದ್ವಿರುದ್ಧವಾಗಿ ಅರಿಮಥಾಯದ ಯೋಸೇಫನು, ಮಹಾಸಭೆಯ ಗೌರವಾನ್ವಿತ ಮನುಷ್ಯನಾಗಿದ್ದರಿಂದ, ಯೇಸುವಿನ ದೇಹವನ್ನು ಸಮಾಧಿ ಮಾಡಲು ಪಿಲಾತನಿಂದ ಅಪ್ಪಣೆ ಹೊಂದಿದನು. ಕ್ರಾಸನ್ ತನ್ನ ಚರ್ಚೆಗೆ ಯಾವುದೇ ಆಧಾರಗಳನ್ನು ನೀಡಿರುವದಿಲ್ಲ. ಅವನು ಅವರಿಗೆ ಶಕ್ತಿ ಇದ್ದಿದ್ದರೆ, ಅವರು ಆತನ ಶಿಷ್ಯರಲ್ಲ. ಅವರು ಆತನ ಸ್ನೇಹಿತರಾಗಿದ್ದರೆ, ಅವರು ಶಕ್ತಿಯನ್ನು ಹೊಂದಿರುವದಿಲ್ಲ.[4] ಯಾವದೇ ಮೂಲಗಳಿಂದ ಸಾಕ್ಷಿಗಳನ್ನು ಹೊಂದದೆ ಸಿದ್ಧಾಂತಗಳನ್ನು ರೂಪಿಸುವದು ಸತ್ಯಕ್ಕೆ ವಿರೋಧವಾಗಿರುತ್ತದೆ. ಯೇಸುವಿನ ಸಮಾಧಿಯ ಬಗ್ಗೆ ವಿವರಣೆ ನೀಡಲು

ಅಸಾಧ್ಯವಾದ್ದರಿಂದ, ಕ್ರಾಸನ್‌ನು ಈ ವಿವಾದವನ್ನು ಸೃಷ್ಟಿಸಿದ್ದಾನೆ.

**ಪುನರುತ್ಥಾನದ ವರದಿ**

ಪುನರುತ್ಥಾನದ ವರದಿಯ ಕ್ರಮದಲ್ಲಿ ಒಂದು ವಿಶೇಷತೆಯಿದೆ. ಆದಿ ಸಭೆಯವರು ಪುನರುತ್ಥಾನವನ್ನು ಕಟ್ಟುಕಥೆಯನ್ನಾಗಿ ಮಾಡಿರುವರು ಎಂಬ ಪ್ರತೀತಿ ಇದೆ (ಕೆಲವರ ಪ್ರಕಾರ ಇದು ಪೌಲನ ಧೋರಣೆ). ಏಕೆಂದರೆ ಯೇಸು ತಾನು ದೇವರಿಂದ ಬಂದ ಮೆಸ್ಸೀಯನಲ್ಲ; ಆತನು ಅದ್ಭುತಮಾಡುವವನಲ್ಲ ಅಥವಾ ಮರಣದಿಂದ ಎದ್ದು ಬಂದವನು ಎಂದು ತಾನೇ ನಿರೂಪಿಸಿರುವದಿಲ್ಲ. ಸುವಾರ್ತೆಯ ಬರಹಗಾರರು ಇದರ ಮೂಲವನ್ನು ಕಂಡುಹಿಡಿದವರು ಎಂಬ ವಾದವಿದೆ. (ನಾಲ್ಕು ಸುವಾರ್ತೆಗಳ ಬರಗಾರರು ಪುನರುತ್ಥಾನದ ಕುರಿತು) ಒಂದೇ ಹೇಳಿಕೆಯನ್ನು ನೀಡದಿರುವದೇ ಒಂದು ಕಾರಣವಾಗಿದೆ. ವಾದ ಮಾಡುವವರಿಗೆ ಇದು ಒಂದು ಮೂಲವಾದರೂ, ಈಕಾರಣಗಳಲ್ಲಿ ಗಂಭೀರವಾದ ನ್ಯೂನತೆಗಳಿವೆ.

ಒಂದು ವೇಳೆ, ಮತ್ತಾಯ, ಮಾರ್ಕ, ಲೂಕ, ಯೋಹಾನರು ಪುನರುತ್ಥಾನದ ಕಥೆಯನ್ನು ಊಹಿಸಿಕೊಂಡು ಬರೆದಿದ್ದರೆ, ಅವರು ನೋಡಿದ ಸಂಗತಿಯನ್ನು ಏಕೆ ಸ್ಪಷ್ಟ ವಾಗಿ ಬರೆದಿರುವದಿಲ್ಲ? ಆತನು ಸತ್ತು ಹೂಣಲ್ಪಟ್ಟನು ಎಂದು ನಾಲ್ಕು ಸುವಾರ್ತೆಗಳಲ್ಲೂ ದಾಖಲೆಗಳು ಇರುವದಾದರೂ ಭಾನುವಾರ ಮುಂಜಾನೆ ಸಮಾಧಿ ಖಾಲಿಯಾಗಿರುವದನ್ನು ಆ ಸ್ತ್ರೀಯರು ಕಂಡರು. ಯೇಸು ಪುನರುತ್ಥಾನ ಹೊಂದಿ ಎದ್ದು ಬರುವದನ್ನು ಕಣ್ಣಾರೆ ಕಂಡ ಸಾಕ್ಷಿಗಳಿರುವದಿಲ್ಲ (ಮತ್ತಾಯ 28:11, ಸಿಪಾಯಿಗಳು ಆತನ ಸಮಾಧಿಯನ್ನು ಕಾಯುತ್ತಿದ್ದರು). ಪುರಾಣಗಳನ್ನು ಕಂಡುಹಿಡಿಯುವ ಮಾರ್ಗಗಳು ಇದಾಗಿರುವದಿಲ್ಲ. ಒಂದು ವೇಳೆ ಇದು ಊಹಿತವಾದ ಸಂಗತಿಯಾಗಿದ್ದರೆ, ನಾಲ್ಕು ಜನ ಸೌವಾರ್ತಿಕರು (ಸುವಾರ್ತಾ ಬರಹಗಾರರು), ಅದಕ್ಕೆ ಅನುಗುಣವಾದ ಭಲವಾದ ಸಾಕ್ಷಿಯನ್ನು ನೀಡುವ ಸಾಧ್ಯತೆಯಿತ್ತು. ಅಲ್ಲಿ ಮಹಾಯಾಜಕರು ಸಾಕ್ಷಿಯಾಗಿರುತ್ತಿದ್ದರು ಅಥವಾ ಯೇಸು ಪುನರುತ್ಥಾನ ಹೊಂದಿರುವನು ಎಂಬುದನ್ನು ಪಿಲಾತನು ದೃಢಪಡಿಸಿರುತ್ತಿದ್ದನು. ಅವರು ಬಲವಾದ ಸಾಕ್ಷಿಗಳನ್ನು ನೀಡದೆ ಇರುವದರಿಂದ, ಅವರ ವಾದವು ಸತ್ಯವಲ್ಲ ಎಂಬ ಹೇಳಿಕೆಯಿದೆ. ಅವರು ಅದನ್ನು ಪ್ರತಿ ಪಾದಿಸುವ ಯತ್ನವನ್ನು ಮಾಡಿರುವದಿಲ್ಲ ಎಂಬ ಅಂಶವನ್ನು ಇಲ್ಲಿ ಹೇಳಲಾಗಿದೆ.

ಇಲ್ಲಿ ಮತ್ತೊಂದು ಅಂಶವನ್ನು ಗ್ರಹಿಸಬೇಕಾಗಿದೆ. ಖಾಲಿಯಾದ ಸಮಾಧಿ ಹಾಗೂ ಪುನರುತ್ಥಾನ ಹೊಂದಿದ ಯೇಸುವನ್ನು ನೋಡಿದವರಲ್ಲಿ ಸ್ತ್ರೀಯರೇ ಮೊದಲಿಗರು. ಈಗಿನ ಕಾಲದಲ್ಲಿ ಆ ಸಾಕ್ಷಿ ಪ್ರಮುಖವಾದರೂ, ಯುದಾಯರ ಕಾಲದಲ್ಲಿ, ಆ ಸಾಕ್ಷಿಗಳಿಗೆ ಯಾವುದೇ ಬೆಲೆ ಇರಲಿಲ್ಲ. ನ್ಯಾಯಾಲಯಗಳಲ್ಲಿ ಸ್ತ್ರೀಯರ ಸಾಕ್ಷಿಗಳನ್ನು ಪರಿಗಣಿಸದೆ ಇದ್ದದ್ದರಿಂದ, ಅವರ ಸಾಕ್ಷಿಯನ್ನು ಅವಲಂಭಿಸಿರಲಿಲ್ಲ. ಯೇಸುವಿನ ಪುನರುತ್ಥಾನದ ಕುರಿತು ಹೊಸ ಒಡಂಬಡಿಕೆಯು ಸ್ತ್ರೀಯರ ಸಾಕ್ಷಿಗ ಳನ್ನು ಬಳಸಿರುತ್ತದೆ. ಆ ಮಾತುಗಳು ಅವರಿಗೆ ಬರೀ ಹರಟೆಯಾಗಿ ತೋರಿದವು (ಲೂಕ 24:11). ಯೇಸುವನ್ನು ಅನುಸರಿಸಿದ ಪುರುಷ ಅನುಯಾಯಿಗಳ ಸಾಕ್ಷಿಗ ಳನ್ನು ಗಂಭೀರವಾಗಿ ಪರಿಗಣಿಸಿರುವದಿಲ್ಲ. ಮತ್ತಾಯ 28:17ರ ಪ್ರಕಾರ ಯೇಸು ತನ್ನ ಶಿಷ್ಯರನ್ನು ಗಲಿಲಾಯ ಪರ್ವತದ ಮೇಲೆ ಸಂಧಿಸಿದಾಗ, "ಕೆಲವರು ಆತನನ್ನು ಆರಾಧಿಸಿದರೂ, ಇನ್ನು ಕೆಲವರು ಸಂದೇಹಪಟ್ಟರು" ಎಂದು ಬರೆದದೆ. ಯೇಸುವಿನ ಪುನರುತ್ಥಾನದ ಸಂಗತಿಯನ್ನು ಅರಿತ ತೋಮನು "ನಾನು ಆತನ ಕೈಗಳಲ್ಲಿ ಮೊಳೆ ಗಳಿಂದಾದ ಗಾಯವನ್ನು ನೋಡಿ ಆ ಮೊಳೆಯ ಗಾಯಗಳಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕಿದ ಹೊರತು ನಿಮ್ಮ ಮಾತನ್ನು ನಂಬುವದೇ ಇಲ್ಲ ಅಂದನು" (ಯೆಹಾನ 20:25). ಅನ್ಯರಿಗೆ ಸತ್ಯದ ಕುರಿತು ಮನವರಿಕೆ ಮಾಡಬೇಕಾದವರೇ, ಅಂದರೆ ಯೇಸುವಿಗೆ ಹತ್ತಿರವಾದವರೇ, ಮೊದಲಿಗೆ ಈ ವಿಷಯವನ್ನು ನಂಬಲಿಲ್ಲ! ಯೇಸುವಿನ ಪುನರುತ್ಥಾನಕ್ಕೆ ಇರುವ ಪ್ರಥಮ ಸಾಕ್ಷಿಗಳೇ, ಸಾಕ್ಷಿಗಳಾಗುವ ಅರ್ಹತೆಯನ್ನು ಕಳಕೊಂಡಿದ್ದರು! ಮನವರಿಕೆ

ಮಾಡಲಾಗದ ಕಥೆಯಲ್ಲವೇ! ಆದ್ದರಿಂದ ಮತ್ತಾಯ ಮಾರ್ಕ, ಲೂಕ ಹಾಗೂ ಯೋಹಾನರು, ಬಲವಾದ ಸಾಕ್ಷಿಗಳನ್ನು ನೀಡಲು ಅನರ್ಹರಾದರು, ಎಂಬುದು ಆಶ್ಚರ್ಯಸಂಗತಿಯೇ!

**ಪುನರುತ್ಥಾನದ ನಂತರ**

ಐದನೆಯದಾಗಿ, ಪುನರುತ್ಥಾನದ ನಂತರ ಆತನು ಹೇಗೆ ಕಾಣಿಸಿಕೊಂಡನು. ಪೌಲನು ಕೊರಿಂಥದವರಿಗೆ ನೀಡಿದ ಪ್ರಥಮ ಆಧ್ಯತೆಗಳಲ್ಲಿ ಯೇಸುವಿನ ಮರಣ, ಹೂಣಿಡುವಿಕೆ ಪುನರುತ್ಥಾನದ ಸಂಗಡ, ಯೇಸು ಅನೇಕ ಜನರಿಗೆ ಕಾಣಿಸಿಕೊಂಡನು ಎಂಬ ಹೇಳಿಕೆ ಯನ್ನು ನೀಡಿರುವನು (1 ಕೊರಿಂಥ 15:5-8; ಅಪೊಸ್ತಲರ ಕೃತ್ಯಗಳು 1:3; ನಾಲ್ವತ್ತು ದಿವಸಗಳ ಕಾಲ ಕಾಣಿಸಿಕೊಂಡನು) ಆತನು ಕೇವಲ ಹನ್ನೊಂದು ಜನ ಅಪೊಸ್ತಲರಿಗೆ ಮಾತ್ರ ಕಾಣಿಸಿಕೊಳ್ಳದೆ, ಐನೂರು ಸಹೋದರರಲಿಗಿಂತಲೂ, ಹೆಚ್ಚಿನವರಿಗೆ ಕಾಣಿಸಿ ಕೊಂಡನು (1 ಕೊರಿಂಥ 15:6), ನಂತರ ಯಾಕೋಬನಿಗೂ (ಪ್ರಾಯಶಃ ಯೇಸುವಿನ ಸಹೋದರನು) ಅಂತಿಮವಾಗಿ ಪೌಲನಿಗೂ ಕಾಣಿಸಿಕೊಂಡನು. ಈ ಎಲ್ಲಾ ದಾಖಲೆಗಳನ್ನು ಸುವಾರ್ತೆಗಳಲ್ಲಿ ತಿಳಿಸಿರುವದಿಲ್ಲ. ಅಪೊಸ್ತಲರ ಕೃತ್ಯಗಳು 9; 22; 26 ಪ್ರಕಾರ ಪೌಲನನ್ನು ಅಪೊಸ್ತಲನನ್ನಾಗಿ ಕರೆದ ಮಾತುಗಳಲ್ಲಿ ಈ ವಿಚಾರಗಳು ಅಡಗಿರುತ್ತವೆ.

ಯೇಸುವಿನ ಅನುಯಾಯಿಗಳು ಇದನ್ನು ಅರಿಯುವಲ್ಲಿ ಮಂದಗತಿಗಳಾಗಿದ್ದರು. ಆದ್ದರಿಂದ ಯೇಸುವಿನ ಅನುಯಾಯಿಗಳಿಗೆ ಮನವರಿಕೆಯಾಗುವಂಥ ಸಾಕ್ಷಿಗಳ ಅಗತ್ಯತೆಯಿತ್ತು, ನಂತರ ಅದು ಅವರ ಪ್ರಮುಖ ಕಾರ್ಯವಾಯಿತು. ಯೇಸು ಅನೇಕ ಜನರಿಗೆ ಕಾಣಿಸಿದ್ದರಿಂದ, ಪೌಲನು ಅಂಥವರ ಸಂಗಡ ಈ ವಿಚಾರದಲ್ಲಿ ತರ್ಕಮಾಡಿದನು.

**ಪರಿವರ್ತನೆಗಳು**

ಪರಿವರ್ತನೆಗೊಂಡ ಸೌಲ ಮತ್ತು ಯಾಕೋಬರು ಯೇಸುವಿನ ಪುನರುತ್ಥಾನಕ್ಕೆ ಸಾಕ್ಷಿಗಳಾಗಿರುವರು. ಯೇಸುವಿನ ಪುನರುತ್ಥಾನದ ಸತ್ಯವನ್ನು ಪ್ರಕಟಿಸುವಲ್ಲಿ ತಾರ್ಸದ ಸೌಲನು, ಸಾಕ್ಷಿಗಳಲ್ಲಿ ಮೊದಲಿಗನು, ನಂತರದಲ್ಲಿ ಅವನು ಅಪೊಸ್ತಲನಾದ ಪೌಲನೆನಿಸಿಕೊಂಡನು. ಅವನು ಕ್ರೈಸ್ತ ಕ್ರಾಂತಿಯ ವೈರಿಯಾಗಿದ್ದನು (ಅಪೊಸ್ತಲರ ಕೃತ್ಯಗಳು 9; 22; 26; ಗಲಾತ್ಯ 1:13, 14; 1 ತಿಮೊಥೆ 1:12-15). ಅಪೊಸ್ತಲರ ಕೃತ್ಯ ಗಳಲ್ಲಿ ಅವನು ಕ್ರೈಸ್ತ ಸಭೆಯ ಹಿಂಸಕನಾಗಿದ್ದನು, ಅವನು ಪರಿವರ್ತನೆಗೊಂಡ ನಂತರ, ಕ್ರೈಸ್ತರಲ್ಲಿ ಮಹಾ ಸಮಾಧಾನಕ್ಕೆ ಕಾರಣನಾದನು (9:31). ಯಾಕೋಬನಿಗೂ ಸಹ ಕ್ರಿಸ್ತನು ಕಾಣಿಸಿಕೊಂಡನು ಎಂದು ಪೌಲನು ತಿಳಿಸಿರುವನು (1 ಕೊರಿಂಥ 15:7). ನಂತರ ಹನ್ನೆರಡು ಜನ (ವಚನ 5). “ಅಪೊಸ್ತಲರೆಲ್ಲರಿಗೆ” (ವಚನ 7) ಒಂದು ವೇಳೆ ಇಲ್ಲಿ ಯಾಕೋ ಬನು ಅಪೊಸ್ತಲನಾಗದೆ ಇರಬಹುದು. ಹೀಗಿದ್ದರೆ ಈ ಯಾಕೋಬನು ಯಾರು? ಆತನು ಯಾಕೋಬನಿಗೆ ಕಾಣಿಸಿಕೊಂಡದ್ದು ಏಕೆ ಗುರುತರವಾಗಿದೆ?

ಯಾಕೋಬನು ಯೇಸುವಿನ ಸಹೋದರನಾಗಿರಬಹುದು ಎಂಬದು ಸಂಭವನೀಯ ಅವನು ಸಹ ಒಂದು ಸಭೆಯ ನಾಯಕನಾಗಿ, ಬಹುಶ ಹೊಸ ಒಡಂಬಡಿಕೆಯ ಯಾಕೋಬನ ಪತ್ರಿಕೆಯನ್ನು ಬರೆದಿರಬಹದು. ಒಂದು ವೇಳೆ ಇತರರಂತೆ, ಯೇಸುವನ್ನು ನೋಡಿದ ಬಳಿಕ ಇವನು ಸಹ ವಿಶ್ವಾಸಿಯಾಗಿರಬಹುದು. ಮಾರ್ಕ 3:21 ಪ್ರಕಾರ ಆತನ ಬಂಧುಗಳು ಅವನಿಗೆ ಹುಚ್ಚು ಹಿಡಿದದೆ ಎಂದು ಹೇಳಿ ಆತನನ್ನು ಹಿಡಿಯುವದಕ್ಕೆ ಹೊರಟರು, ಅಂದರೆ ಯೇಸುವಿನ ಮನೆಯ ಸುತ್ತ ಇದ್ದವರು ಸಹ ಯೇಸುವಿಗೆ ಹುಚ್ಚು ಹಿಡಿದದೆ ಎಂದು ಭಾವಿಸಿದ್ದರು, ಆದ್ದರಿಂದ ಆತನ ಕುಟುಂಬದವರು ಬಂದಿರುವದನ್ನು ಕೇಳಿದಾಗ ಆತನು ದೇವರ ಚಿತ್ತವನ್ನು ನೆರವೇರಿಸುವವರೇ ನನ್ನ ಸಹೋದರ, ಸಹೋದರಿಯರು ಎಂದು ಯೇಸು ಹೇಳಿದನು (ಮಾರ್ಕ 3:31-35). ಯೋಹಾನ 7:5 ರಲ್ಲಿ ಆತನ ಸಹೋದರರು ಸಹ ಆತನನ್ನು ನಂಬದೆ

ಇದ್ದರು. ಅಪೊಸ್ತಲರ ಕೃತ್ಯಗಳು 1:14ರಲ್ಲಿ ಆತನು ಪುನರುತ್ಥಾನ ಹೊಂದಿ, ಪರಲೋಕಕ್ಕೆ ಏರಿ ಹೋದ ನಂತರದಲ್ಲಿ, ಉಳಿದ ಅಪೊಸ್ತಲರು ಏಕ ಮನಸ್ಸಾಗಿ ದೇವರ ಪ್ರಾರ್ಥನೆಯಲ್ಲಿ ನಿರತರಾಗಿದ್ದರು. ಕೆಲವು ಮಂದಿ ಹೆಂಗಸರೂ ಯೇಸುವಿನ ತಾಯಿಯಾದ ಮರಿಯಳೂ, *ಆತನ ತಮ್ಮಂದಿರೂ* ಅವರ ಸಂಗಡ ಇದ್ದರು (ಒತ್ತಿ ಹೇಳಿದ್ದು ನನ್ನದು). ಶಿಲುಬೆಯ ಕ್ರಿಯೆ ಮತ್ತು ಅಪೊಸ್ತಲರ ಕೃತ್ಯಗಳು 1ರ ಕ್ರಿಯೆಯ ನಡುವೆ ಯಾಕೋಬನು ಒಬ್ಬ ವಿಶ್ವಾಸಿಯಾಗಿರಬಹುದು, ಆದ್ದರಿಂದ ಪುನರುತ್ಥಾನದ ವಿಚಾರದಲ್ಲಿ ಪೌಲ ಮತ್ತು ಯಾಕೋಬರು ಪೂರ್ಣ ಮನವರಿಕೆ ಹೊಂದಿದ್ದರು.

**ತ್ಯಾಗದ ಭಕ್ತಿ**

ಪುನರುತ್ಥಾನದ ನಿಮಿತ್ತ ಶಿಷ್ಯರು ತಮ್ಮ ಪ್ರಾಣವನ್ನು ತ್ಯಾಗಮಾಡಲು ಸಿದ್ಧರಿದ್ದರು. ಆದಿ ಕ್ರೈಸ್ತರ ಸಾಂಪ್ರದಾಯದ ಪ್ರಕಾರ, ಆದಿ ಅಪೊಸ್ತಲರು, ಯೇಸುವಿನ ಮರಣ ಪುನರುತ್ಥಾನದ ಕಾರಣಕ್ಕಾಗಿ (ಯೂದನು ಹಾಗೂ ಯೋಹಾನನ ಹೊರತು) ರಕ್ತಸಾಕ್ಷಿಗಳಾದರು. ಒಂದು ವೇಳೆ ಅವರು ಅರಿತ್ತಿದ್ದ ಸಂಗತಿಯು ಸುಳ್ಳೇ ಎಂಬುದಾಗಿದ್ದರೂ, ಅವರು ಅದಕ್ಕಾಗಿ ರಕ್ತಸಾಕ್ಷಿಗಳಾದದ್ದನ್ನು ವಿವರಿಸಲು ಸಾಧ್ಯವೇ. ಈ ರೀತಿಯಾಗಿದ್ದರೆ, ಅವರಲ್ಲಿ ಒಬ್ಬನಾದರೂ ಇದಕ್ಕೆ ತದ್ವಿರುದ್ಧವಾದ ಸಾಕ್ಷಿಯನ್ನು ನುಡಿಯುತ್ತಿದ್ದರು. ಅವರಲ್ಲಿ ಒಬ್ಬರಾದರೂ ಈ ರೀತಿ ಹೇಳಿಕೆ ನೀಡಿದರು ಎಂಬ ಇತಿಹಾಸವಿಲ್ಲ.

**ಸಭೆ**

ಇದ್ದಕ್ಕಿದ್ದ ಹಾಗೆ ಸಭೆಯು ತನ್ನ ಅಸ್ತಿತ್ವವನ್ನು ಹೊಂದಿತು ಎಂಬ ಇತಿಹಾಸವಿರುವದಿಲ್ಲ, ಸಭೆಯ ಬೆಳವಣಿಗೆ ಪ್ರಸ್ತುತ ಬೆಳೆಯುತ್ತಲೇ ಇದೆ. ಆತನ ಅನುಯಾಯಿಗಳು ಹಿಂಸೆಗೆ ಒಳಪಟ್ಟರು ಎಂಬ ವಿಶೇಷ ಸಂಗತಿಯನ್ನು ಮನದಟ್ಟು ಮಾಡಿಕೊಳ್ಳಬೇಕು. ಹಿಂಸೆಯ ನಡುವೆ ಅನೇಕ ಕ್ರಾಂತಿಗಳು ಸೃಷ್ಟಿಯಾಗಿರುತ್ತವೆ. ಕ್ರೈಸತ್ವದ ಬೆಳವಣಿಗೆಗೆ ಹಾಗೂ ಅದರ ಅಭಿವೃದ್ಧಿಗೆ ಕಾರಣವನ್ನು ಅರಿಯಬೇಕು. ಮರಣವನ್ನು ಹೊಂದಿ, ಪುನರುತ್ಥಾನ ಹೊಂದಿದ ಯೇಸು ಮನವರಿಕೆಯನ್ನು ಉಂಟುಮಾಡಿ, ನಿತ್ಯಜೀವವನ್ನು ಅನುಗ್ರಹಿಸಿರುವನು, ಇದರ ಅನುಭವ ಹೊಂದಿರುವರು ಈ ವಿಚಾರವನ್ನು ಮನದಟ್ಟು ಮಾಡುವರು. ಯೇಸುವಿನ ಕುರಿತ ವಿಚಾರವು, ಆತನನ್ನು ಮೊದಲಿಗೆ ಹಿಂಬಾಲಿಸಿದವರಲ್ಲಿ ಪರಿಣಾಮ ಬೀರಿರುವದರಿಂದ, ಕ್ರೈಸ್ತ ಕ್ರಾಂತಿಯು ಉಂಟಾಗಿದೆ. ಸುವಾರ್ತೆಯು ಸಹ ಈ ಸಂಗತಿಯ ಪರಿಣಾಮವಾಗಿದೆ ಎಂದು ಜೇಮ್ಸ್, ಡನ್‌ರವರು ತಿಳಿಸಿರುವರು. "ಇತಿಹಾಸದಲ್ಲಿ ಪರಿಣಾಮ ಬೀರಿರುವ, ನಜರೇತಿನ ಯೇಸುವಿನ ವಿವರಣೆಯಿಲ್ಲದೆ, ಐತಿಹಾಸಿಕ ಕ್ರೈಸ್ತತ್ವವನ್ನು ಅರಿಯುವದು ಅಸಾಧ್ಯ."[5] ಆತನ "ಪುನರುತ್ಥಾನದ" ಮಹತ್ವವನ್ನು ಹೊಸ ಒಡಂಬಡಿಕೆಯಲ್ಲಿ ದಾಖಲು ಮಾಡಲಾಗಿದೆ. ಬೆನ್ ವಿತರಿಂಗ್‌ಟನ್ III ಈ ಕೆಳಕಂಡ ನಿರ್ಣಯವನ್ನು ನೀಡಿರುವರು:

> ... ಶಿಲುಬೆಯ ನಂತರ, ಮಹತ್ಕಾರ್ಯದಿಂದ ಸಭೆಯು ವೃದ್ಧಿಗೊಂಡಿತು - ಹಾಗು ಇದರ ಮೂಲಕ ಯೇಸುವಿನ ಅಂತರಿಕ ಶಿಷ್ಯರು ವೃದ್ಧಿಗೊಂಡರು. ಮರಣಹೊಂದುತ್ತಿದ್ದ ಯೇಸುವನ್ನು ಸ್ತ್ರೀಯರು ಗಮನಿಸುವಾಗ, ಸಕಲ ಪುರುಷ ಶಿಷ್ಯರು ಆತನನ್ನು ಬಿಟ್ಟು ಹೋದರು. ಆದರೆ ಸ್ತ್ರೀಯರು ಆತನ ದೇಹಕ್ಕೆ ಪುಷ್ಪಗುಚ್ಛವನ್ನಿರಿಸಿದರು. ಪುನರುತ್ಥಾನವು ಸಕಲಗೊಂಡವನನ್ನು ನಿರ್ನಾಮ ಮಾಡಿತು, ಇಲ್ಲದಿದ್ದರೆ, ಯೇಸುವನ್ನು ಇತಿಹಾಸದ ಕಸದ ತೊಟ್ಟಿಯಲ್ಲಿ ನೋಡ ಬೇಕಿತ್ತು.[6]

## ಆತನು ಇನ್ನು ಜೀವದಿಂದ ಇರುವನೇ?

ಕ್ರೈಸ್ತ ನಂಬಿಕೆದ ಪ್ರಮುಖವಾದ ಅಂಶ ಯೇಸುಸ್ವಾಮಿಯು ಅವರ ಕೂಡ ಮಾತಾಡಿದ

ಮೇಲೆ ಆಕಾಶಕ್ಕೆ ಒಯ್ಯಲ್ಪಟ್ಟು ದೇವರ ಬಲಗಡೆಯಲ್ಲಿ ಆಸನರೂಢನಾದನು (ನೋಡಿರಿ ಮಾರ್ಕ 16:19).

> ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆಹೋದವರಲ್ಲಿ ಪ್ರಥಮಫಲವಾದನು. ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವದು. ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. ಆದರೆ ಪ್ರತಿಯೊಬ್ಬನು ತನ್ನ ತನ್ನ ತರಗತಿಯಲ್ಲಿರುವನು. ಕ್ರಿಸ್ತನು ಪ್ರಥಮಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದು ಬರುವರು. ಆ ಮೇಲೆ ಆತನು ಬೇರೆ ಎಲ್ಲಾ ಧೊರೆತನವನ್ನೂ ಎಲ್ಲಾ ಅಧಿಕಾರವನ್ನೂ ಬಲವನ್ನೂ ನಿವೃತ್ತಿ ಮಾಡಿ ತಂದೆಯಾಗಿರುವ ದೇವರಿಗೆ ರಾಜ್ಯವನ್ನು ಒಪ್ಪಿಸಿಕೊಡುವಾಗ ಸಮಾಪ್ತಿ ಯಾಕಂದರೆ ತಾನು ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ ಕೆಳಗೆ ಹಾಕಿಕೊಳ್ಳುವ ತನಕ ರಾಜ್ಯವನ್ನಾಳುವದು ಅವಶ್ಯ (1 ಕೊರಿಂಥ 15:20-26).

ವಿಶ್ವಾಸಿಗಳ ಭವಿಷ್ಯವನ್ನು ಆತನು ಇನ್ನು ಚೈತನ್ಯಗೊಳಿಸುತ್ತಿರುವನು, ಈಗ ಮರಣವು ಒಂದು ಸಮಸ್ಯೆಯಲ್ಲ.

ಯೇಸು ಕ್ರಿಸ್ತನು ಅಂತಿಮವಾದ ಮಹಾಯಾಜಕನು ಎಂದು ಇಬ್ರಿಯ 7:23-25ರಲ್ಲಿದೆ. ಮೋಶೆಯ ಕಾಲದ ಯಾಜಕರಿಗಿಂತ ಉತ್ತಮ ಸೇವೆ ಮಾಡಿರುವನು. "ಲೇವಿಯರು ಶಾಶ್ವತ ವಾಗಿ ಉದ್ಯೋಗನಡಿಸುವದಕ್ಕೆ ಮರಣವು ಅಡಿಯಾದದರಿಂದ ಅವರಲ್ಲಿ ಯಾಜಕರಾದವರು ಅನೇಕರು; ಆತನಾದರೋ ಸದಾಕಾಲವಿರುವದರಿಂದ ಆತನ ಯಾಜಕತ್ವವು ಮತ್ತೊಬ್ಬರಿಗೆ ಹೋಗುವಂಥದಲ್ಲ. ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ; ಅವರಿಗೋಸ್ಕರ ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ." ಯೇಸುವಿನ ಮರಣ ಪುನರುತ್ಥಾನವನ್ನು ಅರಿತಿರುವ ವಿಶ್ವಾಸಿಗಳು ಆತನು ನಿರಂತರವಾಗಿರುವನು ಎಂಬ ಅಂಶವನ್ನು ಅರಿತು, ಹೃದಯದಲ್ಲಿ ಭರವಸೆಯನ್ನು ಹೊಂದುವರು, ಆತನನ್ನು ಹಿಂಬಾಲಿಸುವವರಿಗೆ ಆತ್ಮೀಕ ಸಂದಾನವು ದೊರೆಯುತ್ತವೆ.

ಯೇಸು ಪುನರುತ್ಥಾನ ಹೊಂದಿರುವ ವಿಚಾರದ ಪ್ರಶ್ನೆಯಲ್ಲಿ, ಸಾಕ್ಷಿಗಳನ್ನು ಗಮನಿಸಿ, ನೀವು ನಿರ್ಧಾರವನ್ನು ಮಾಡಿರಿ.

---

ಟಿಪ್ಪಣೆಗಳು

[1]These points are discussed in Gary L. Habermas, "Why I Believe the Miracles of Jesus Actually Happened," N. L. Geisler and P. K. Hoffman, eds., *Why I Am a Christian: Leading Thinkers Explain Why They Believe,* rev. and exp. ed. (Grand Rapids, Mich.: Baker Books, 2006), 126-34. [2]"There is no form of early Christianty known to us - though there are some that have been invented by ingenious scholars - that does not affirm at its heart that after Jesus' shameful death God raised him to life again" (N. T. Wright, *The Challenge of Jesus: Rediscovering Who Jesus Was and Is* [Downers Grove, Ill.: InterVarsity Press, 1999], 126). [3]John Dominic Crossan, *Jesus: A Revolutionary Biography* (San Francisco: HarperSanFrancisco, 1995), 154. [4]John Dominic Crossan, *The Historical Jesus: The Life of a Mediterranean Jewish Peasant* (San Francisco: HarperSanFrancisco, 1991), 393. [5]James D. G. Dunn, *A New Perspective on Jesus:*

*What the Quest for the Historical Jesus Missed* (Grand Rapids, Mich.: Baker Academic, 2005), 22-23. [6]Ben Witherington III, *What Have They Done with Jesus? Beyond Strange Theories and Bad History - Why We Can Trust the Bible* (San Francisco: HarperSanFrancisco, 2006), 11.